ಇ) ಹಾಗಿದ್ದಲ್ಲಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಯಾವ ಕಾರಣಕ್ಕಾಗಿ ವಿಳಂಬವಾಗಿದೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು).—

ಇಲ್ಲ,

ಆ) ಮತ್ತು ಇ) ಉದ್ಭವಿಸುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಮಂತ್ರಿಗಳ ಹಾರಿಕೆಯ ಉತ್ತರವನ್ನು ಕೇಳಿದ ಮೇಲೆ ಬಹಳ ವಿಸ್ಮಯವಾಗುತ್ತದೆ. ಕಳೆದ ವರ್ಷ ಪಿ. ಹೆಚ್. ಇ. ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಬೇಕು ಹಾಗೂ ಬೀಳಗಿ ಮುಂತಾದ ನಾಲ್ಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿದ್ದರು. ಇದು ಪ್ರದೇಶ ಸಮಾಚಾರದಲ್ಲಿ ಮತ್ತು ಪತ್ರಿಕೆಯಲ್ಲಿ ಕೂಡ ಬಂದಿದೆ. ಇಲ್ಲಿ ಇವರು ಅಧಿಕಾರಿಗಳುಕೊಟ್ಟಂತಹ ಉತ್ತರವನ್ನು ಕೊಡುತ್ತಿದ್ದಾರೆ. ಬೀಳಗಿ ತಾಲ್ಲೂಕಿನಲ್ಲಿರುವ ನಾಲ್ಕು ಎಕರೆ ನಿವೇಶನವನ್ನು ಕೂಡ ಅಸಿಸ್ಟೆಂಟ್ ಕಮೀಷನರ್‌ರವರು ನೋಡಿಕೊಂಡು ಹೋಗಿದ್ದಾರೆ, ಈಗ ಈ ನಿರ್ಮಾಣ ಕಾರ್ಯ ಉದ್ಭವಿಸುವುದಿಲ್ಲವೆಂದು ಹೇಳಿದರೆ ಹೇಗೆ ? ಅಧಿಕಾರಿಗಳು ಹೇಳಿದ ಮಾಹಿತಿ ಮೇರೆಗೆ ಉತ್ತರ ಕೊಟ್ಟಿದ್ದೀರಿ, ಈ ಬಗ್ಗೆ ತಾವು ಸರಿಯಾದ ಉತ್ತರವನ್ನು ತರಿಸಿ ಕೊಡಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧಿಕಾರಿಗಳು ಕೊಟ್ಟಂತಹ ಮಾಹಿತಿ ಪ್ರಕಾರ ಉತ್ತರವನ್ನು ಇಲ್ಲಿ ನೀಡಿದ್ದೇನೆ ಅವರು ಕೊಟ್ಟಂತಹ ಉತ್ತರ ಸರಿಯಿಲ್ಲವೆಂದು ತೋರಿಸಿ ಕೊಟ್ಟರೆ ಅವರ ಅಭಿಪ್ರಾಯಕ್ಕನುಗುಣವಾಗಿ ನಾವು ಏನು ಬೇಕೋ ಅದನ್ನು ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ೧೯೮೮ನೇ ಇಸವಿಯಲ್ಲಿ ಭಾರತೀಯ ಜನಸಂಖ್ಯಾ ಯೋಜನೆಯ ಕೈಕೆಳಗೆ ೨೬೪೯ ಕಟ್ಟಡಗಳನ್ನು ಕಟ್ಟಬೇಕೆಂದು ತೀರ್ಮಾನ ತೆಗೆದುಕೊಂಡು ೩೫ ಕೋಟಿ ೬೦ ಲಕ್ಷ ರೂಪಾಯಿಗಳು ಮಂಜೂರಾಗಿ ನಾನಾ ಹಂತಗಳಲ್ಲಿ ಕೆಲಸಗಳು ನಡೆಯುತ್ತಿವೆ ಮತ್ತು ಕೆಲವು ಕೆಲಸಗಳು ಮುಗಿದಿದೆ. ಇದು ಅದರ ಕೆಳಗೆ ಬರಬೇಕಾಗಿತ್ತು ಅದರೆ ಆ ಯೋಜನೆ ಕೆಳಗೆ ಇದನ್ನು ಮಂಜೂರು ಮಾಡಿಕೊಂಡಿಲ್ಲ, ಇದಕ್ಕೆ ಹೊಸ ಪ್ರಯತ್ನ ನಡೆಯಬೇಕೇ ಹೊರತು ಈ ಯೋಜನೆ ಅಡಿಯಲ್ಲಿ ಯಾವ ವಿಧವಾದಂತಹ ಅನುಕೂಲವೂ ಸಿಗುವುದಿಲ್ಲ ಕಾರಣವೇನೆಂದರೆ ಆ ಯೋಜನೆ ಮಂಜೂರಾದ ಮೇಲೆ ಅನಂತರ ವ್ಯತ್ಯಾಗಳನ್ನು ಮಾಡುವುದಕ್ಕೆ ಬರುವುದಿಲ್ಲ.

ಸಾಲ್ವಾರ ಗ್ರಾಮದಲ್ಲಿ ಆರಕ್ಷಕ ಠಾಣೆ

೧೫೨ (೨೩೫) (ಬಿ) ಶ್ರೀ ಕೆ. ಬಿ. ಶಾಣಪ್ಪ(ಷಹಬಾದ್).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಸಾಲ್ವಾರ ಗ್ರಾಮದಲ್ಲಿ ಆರಕ್ಷಕ ಠಾಣೆಯು ಮಂಜೂರಾಗಿದ್ದರೂ ಕಾರ್ಯಗತವಾಗದೆ ಇರಲು ಕಾರಣಗಳೇನು ?

ಆ) ಕಳೆದ ಅಧಿವೇಶನದಲ್ಲಿ ಈ ವರ್ಷದಲ್ಲಿಯೇ ಕಾರ್ಯರೂಪಕ್ಕೆ ತರಲಾಗುವುದೆಂದು ಮಾನ್ಯ ಸಚಿವರು ಲಿಖಿತ ಮೂಲಕ ಭರವಸೆ ನೀಡಿರುವುದು ನಿಜವಲ್ಲವೇ ?

ಇ) ಹಾಗಿದ್ದಲ್ಲಿ, ಸದರಿ ಆರಕ್ಷಕ ಠಾಣೆಯು ಕಾರ್ಯವನ್ನು ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳುವರೆ ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಇನ್ನೂ ಮಂಜೂರಾಗಿಲ್ಲ.

ಆ) ಕಳೆದ ಅಧಿವೇಶನದಲ್ಲಿ ಪರಿಶೀಲಿಸಲಾಗುವುದೆಂದು ಮಾತ್ರ ತಿಳಿಸಲಾಗಿತ್ತು.

ಇ) ಆರ್ಥಿಕ ಅನುಕೂಲತೆಯ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಅಭಿವೃದ್ಧಿ ಯೋಜನೆಯ ಪ್ರಕಾರ ಪೋಲೀಸ್ ಸ್ಟೇಷನ್ ಕೊಡಬೇಕೆಂದು ಮಹಾ ನಿರ್ದೇಶಕರು ವರದಿಯನ್ನು ತಯಾರು ಮಾಡಿದ್ದಾರೆ ಆದರೆ ಯೋಜನೆಗೆ ಸರಕಾರ ಹಣಕಾಸಿನ ತೊಂದರೆಯಿಂದ ಇನ್ನೂ ಒಪ್ಪಿಗೆ ಕೊಟ್ಟಿಲ್ಲ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಪೋಲೀಸ್ ಸ್ಟೇಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಸಾಲ್ವಾರ ಗ್ರಾಮಕ್ಕೆ ಸೇರಿದಂತೆ ೮-೧೦ ಹಳ್ಳಿಗಳು ಇದೆ ಅಲ್ಲಿ ದೊಡ್ಡ ದೊಡ್ಡ ಜಮೀನ್ದಾರರು ಇರುವಂತಹ ಪ್ರಾಭಲ್ಯವಾದಂತಹ ಒಂದು ಹಳ್ಳಿ, ಅಲ್ಲಿನವರು ಪೋಲೀಸ್ ಸ್ಟೇಷನ್‌ಗೆ ಬರುವುದಿಲ್ಲ ಒಂದು ವೇಳೆ ಹೋಗಬೇಕಾದರೆ ೨೦-೩೦ ಕಿಲೋ ಮೀಟರ್ ದೂರ ಹೋಗ ಬೇಕಾಗುತ್ತದೆ. ಅಲ್ಲಿಯೇ ಒಂದು ಪೋಲೀಸ್ ಸ್ಟೇಷನ್ ಆದರೆ ಅವರು ಅಲ್ಲಿಗೆ ಹೋಗುತ್ತಾರೆ. At least they will have some sort of protection from oppression. ಆ ದೃಷ್ಟಿಕೋನದಿಂದ ಇದನ್ನು ಕೇಳಿದ್ದೇನೆ. ಕಳೆದ ಅಧಿವೇಶನದಲ್ಲಿ, ೧೯೬೭ರಲ್ಲಿ ಆದಷ್ಟು ಮಟ್ಟಿಗೆ ಈ ಬಗ್ಗೆ ಏನಾದರೂ ಮಾಡೋಣವೆಂದು ಲಿಖಿತ ಉತ್ತರದಲ್ಲಿ ಹೇಳಿದ್ದೀರಿ ದಯವಿಟ್ಟು ಅದನ್ನು ಈಗ ಕಾರ್ಯಗತ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇದಕ್ಕೆ ಸಾಧ್ಯವಾದ ಮಟ್ಟಿಗೆ ಮುಂದಿನ ೮೮-೮೯ ರಲ್ಲಿ ಪೋಲೀಸ್ ಸ್ಟೇಷನ್‌ನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಶಾಣಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರ ಮುಗಿದಿದೆ. ನಿಮ್ಮೆಲ್ಲರ ಹಿತದೃಷ್ಟಿಯಿಂದ, ಆಸಕ್ತಿಯ ದೃಷ್ಟಿಯಿಂದ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡದೇ ಒಂದೊಂದೇ ಸಪ್ಲಿಮೆಂಟರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಅದೇ ರೀತಿ ಬಾಬುರೆಡ್ಡಿ ತುಂಗಳ್‌ರವರಿಗೂ ಒಂದಕ್ಕೆ ಅವಕಾಶ ಕೊಟ್ಟಿದ್ದೇನೆ.

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದ

೧೫೫. (೩೨೦) ಶ್ರೀ ಕೆ. ಹೆಚ್. ಪಾಟೀಲ್ (ಗದಗ),—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ,

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಮಹಾರಾಷ್ಟ್ರ ಮುಖ್ಯ ಮಂತ್ರಿಗಳೊಡನೆ ರಾಜ್ಯದ ಮುಖ್ಯ ಮಂತ್ರಿಗಳು ನಡೆಸಿದ ಮಾತುಕತೆಗಳ ಮುಖ್ಯಾಂಶಗಳೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು),—ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳು ದಿನಾಂಕ ೨೯-೯-೮೬ ರಂದು ಮುಂಬಯಿಯಲ್ಲಿ ಭೇಟಿಯಾಗಿ ಸೌಹಾರ್ದ ಯುತವಾಗಿ ಮಾತುಕತೆ ನಡೆಸಿದರು. ಅದರ ಮುಖ್ಯಾಂಶಗಳು ಈ ರೀತಿಯಾಗಿವೆ :

೧. ಮಹಾರಾಷ್ಟ್ರ ಸರಕಾರವು ಗಡಿ ಪ್ರದೇಶಗಳಲ್ಲಿನ ಕನ್ನಡ ಶಾಲೆಗಳಲ್ಲಿ ಎಂಟನೆಯ ತರಗತಿ ವರೆಗೆ ಮರಾಠೀ ಭಾಷೆಯನ್ನು ಕಡ್ಡಾಯವಾಗಿ ಕಲಿಸುವ ಕ್ರಮವನ್ನು ತೆಗೆದುಹಾಕಲು ಏಕಪಕ್ಷೀಯ ವಾಗಿ ನಿರ್ಣಯಿಸಿದ್ದರಿಂದ ಕರ್ನಾಟಕ ಸರಕಾರವೂ ಇದೇ ನೀತಿಯನ್ನು ಅನುಷ್ಠಾನಕ್ಕೆ ತರುವುದೆಂದು ಆ ಸರಕಾರವು ಆಶ ವ್ಯಕ್ತಪಡಿಸಿತು. ಕರ್ನಾಟಕ ಮಹಾರಾಷ್ಟ್ರ ಗಡಿಪ್ರದೇಶದ ಜನರ ಅನುಕೂಲತೆ ಹಾಗೂ ಅಭಿವೃದ್ಧಿಯ ವಿಚಾರದಲ್ಲಿ ಎರಡೂ ಸರಕಾರ ಒಂದೇ ರೀತಿಯ ಕ್ರಮ ತೆಗೆದುಕೊಕ್ಕೆಪ ನೀತಿಯನ್ನು ಒಪ್ಪಿರುವುದರಿಂದ ಆ ಆಧಾರದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಲಾಯಿತು.

೨. ಎರಡೂ ರಾಜ್ಯದ ಮುಖ್ಯ ಮಂತ್ರಿಗಳು, ಗಡಿ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ತೀವ್ರಗೊಳಿಸಬೇಕು. ಈ ಸಂಬಂಧವಾಗಿ ಗಡಿ ಪ್ರದೇಶಗಳ ಭವಿಷ್ಯದ ಅನಿಶ್ಚಿತತೆಯಿಂದಾಗಿ ಯಾವುದೇ ಸಡಿಲು ಧೋರಣೆ ತಳೆಯಕೂಡದು ಈ ಪ್ರದೇಶಗಳು ಯಾವುದೇ ರಾಜ್ಯಕ್ಕೆ ಅಂತಿಮವಾಗಿ ಸೇರಿದರೂ ಅವು ಭಾರತದ ಭಾಗಗಳಾಗಿ ಉಳಿಯುವುವು, ರಾಷ್ಟ್ರೀಯ ಐಕ್ಯತೆಯ ದೃಷ್ಟಿಯಿಂದಲೂ ಇದು ಮುಖ್ಯ, ಎಂಬ ವಿಚಾರವನ್ನು ಒಪ್ಪಿಕೊಂಡರು.

೩. ಸರಕಾರದಿಂದ ನಡೆಸಲಾಗುವ ತಾಂತ್ರಿಕ, ವೈದ್ಯಕೀಯ ಮತ್ತು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಗಡಿ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳಿಗೆ ಸೀಟು ಕಾದಿರಿಸುವಿಕೆಯ ವಿಷಯದ ಪರಿಶೀಲನೆ ಮಾಡಲಾಗುವುದು, ಗಡಿ ಭಾಗಗಳಲ್ಲಿನ ಜನರಲ್ಲಿ ಸೌಹಾರ್ದತೆ ಮತ್ತು ಅನ್ಯೋನ್ಯತೆಯನ್ನು ಹೆಚ್ಚಿಸಲು ಸರಕಾರೀ ಆದೇಶಗಳನ್ನು ಮಾತೃ ಭಾಷೆಯಲ್ಲಿ ಹೊರಡಿಸುವ ದಿಸೆಯಲ್ಲಿ ದಾಖಲೆ ಹಾಗೂ ನಮೂನೆ ಗಳನ್ನು, ಕನ್ನಡ ಹಾಗೂ ಮರಾಠಿ ಭಾಷೆಯಲ್ಲಿ ಹೊರಡಿಸಲು ಎರಡೂ ಸರಕಾರಗಳು ಈಗಾಗಲೇ ಕ್ರಮ ತೆಗೆದುಕೊಂಡಿದ್ದರೆ, ಇಂತಹ ಕ್ರಮ ತೆಗೆದುಕೊಳ್ಳಬೇಕೆಂದು ಕೂಡ ನಿರ್ಣಯಿಸಲಾಯಿತು.